ಲಿಸ್ಟ್‌ನ್ನು ಪಬ್ಲಿಷ್ ಮಾಡಿದ್ದೇವೆ. ಆದರೆ, ಪೋಲೀಸ್ ರಿಪೋರ್ಟ್ ಮತ್ತು ಇನ್‌ಕಮ್ ರಿಪೋರ್ಟ್ ಬರಬೇಕಾಗುತ್ತದೆ. ಇದು ಒಂದು ಪ್ರೋಸೀಜರ್. ಇದರ ಪ್ರಕಾರ ವರದಿ ಬಂದ ಮೇಲೆ ಅವರನ್ನು ಕೂಡ ಪೋಸ್ಟಿಂಗ್ ಮಾಡುವುದು ಮಾತ್ರ ಇದೆ. ರಿಪೋರ್ಟ್ ಬಂದ ಕೂಡಲೇ ನಾವು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ಗ್ರಾಮಾಂತರ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಕಟ್ಟಡದ ಕೊರತೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕಟ್ಟಡದ ಕೊರತೆ ನೀಗುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ? ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಶದಲ್ಲಿ ಶಾಲೆಗಳ ರಿಪೇರಿ, ಮೇಂಟೆನೆನ್ಸ್ ಕೆಲಸ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಶಾಲೆಗಳ ನಿರ್ಮಾಣ ಮತ್ತು ರಿಪೇರಿ ಕೆಲಸಕ್ಕೆ ವಾರ್ಷಿಕವಾಗಿ ಸರ್ಕಾರ ಏನು ನಿಗದಿ ಮಾಡಿದೆ ಅದರಂತೆ ಖರ್ಚು ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೆ, ಹೈಸ್ಕೂಲು, ಪ್ರೈಮರಿ ಶಾಲೆಗಳು ಜಿಲ್ಲಾಪರಿಷತ್ತಿಗೆ ಬರುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಕಟ್ಟಬೇಕಾಗುತ್ತದೆ. ಕಟ್ಟಡ ಇಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಕೆಲವೊಂದು ಜಿಲ್ಲಾಪರಿಷತ್ತಿನವರು ಹೈಸ್ಕೂಲು ಮಂಜೂರು ಮಾಡಿದರು. ಸರ್ಕಾರದವರು ಸರ್ಕಾರಿ ಹೈಸ್ಕೂಲು ಮಂಜೂರು ಮಾಡಿದರು. ಇಂತಹ ಸಮಸ್ಯೆಗಳು ಬರುವುದು ಸ್ವಾಭಾವಿಕ. ನಮ್ಮ ಸರ್ಕಾರದ ಜವಾಬ್ದಾರಿ ಇರುತ್ತದೆ. ಜಿಲ್ಲಾ ಪರಿಷತ್ತಿನವರಿಗೆ ಹೇಳಿ ಅವರ ಬಡ್ಜೆಟ್‌ನಲ್ಲಿ ಶಾಲೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತೇವೆ.

ರಾಜ್ಯದಲ್ಲಿ ಕೋಳಿಮರಿ ಉತ್ಪಾದನಾ ಉದ್ಯಮಗಳ ಸಂಖ್ಯೆ

110 (30) ಶ್ರೀ ಕೆ. ಹರ್ಷಕುಮಾರ ಗೌಡ(ಜಾಮರಾಜ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಹ್ಯಾಚರೀಸ್ (ಕೋಳಿ ಮರಿ ಉತ್ಪಾದನೆ ಉದ್ಯಮಗಳೆಷ್ಟು);

ಆ) ಅವುಗಳಲ್ಲಿ, ಸ್ವದೇಶೀಯ ಸಂಸ್ಥೆಗಳೆಷ್ಟು, ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳೆಷ್ಟು;

ಇ) ಈ ಸಂಸ್ಥೆಗಳ ಮೇಲೆ ರಾಜ್ಯ ಸರಕಾರಿ ಹೊಂದಿರುವ ಹತೋಟಿ ಏನು;

ಈ) ಪ್ರತಿ ಹ್ಯಾಚರಿ ನಡೆಸುವ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) 21

ಆ) ಸ್ವದೇಶೀಯ –21
ವಿದೇಶೀಯ – ಇಲ್ಲ

ಇ) ಸದ್ಯಕ್ಕೆ ಯಾವ ಹತೋಟಿ ಇರುವುದಿಲ್ಲ.

ಈ) ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಅನುಬಂಧ:

ಹ್ಯಾಚರಿ ನಡೆಸುವ ವಾರ್ಷಿಕ ಅಂದಾಜು ವ್ಯವಹಾರಗಳ ಪಟ್ಟಿ ಖಾಸಗಿ ಸಂಸ್ಥೆ

1. ಆಕಾಶ ಹ್ಯಾಚರಿಸ್	33,00,000
2. ಬೆಂಗಳೂರು ಬೇಸಿಕ್ ಬ್ರೀಡರ್	1,61,00,000
3. ಚಾಮುಂಡಿ ಹ್ಯಾಚರೀಸ್	6,00,000
4. ಡೀಜೇ ಹ್ಯಾಚರೀಸ್	4,73,00,000
5. ಇಂಡಿಯಾ ಪೌಲ್ಟ್ರಿ ಫಾರಂ	5,41,00,000
6. ಸೌತ್ ವೆಸ್ಟ್ ಪೌಲ್ಟ್ರಿ ಹ್ಯಾಚರೀಸ್	72,00,000
7. ತ್ರಿಪ್ತಿ ಪೌಲ್ಟ್ರಿ ಬ್ರೀಡಿಂಗ್ ಫಾರಂ	16,00,000
8. ವೆಂಕಟೇಶ್ವರ ಹ್ಯಾಚರಿಸ್	68,00,000
9. ಕೋಮಲ ಹ್ಯಾಚರಿಸ್	66,00,000
10. ಕೋಟೇಶ್ವರ ಹ್ಯಾಚರಿಸ್	2,00,000
11. ದಕ್ಷಿನ್ ಕೆಗ್ಸ್	82,00,000
12. ಸಂಡೂರ್ ಹ್ಯಾಚರಿಸ್	40,00,000
13. ವೀನಸ್ ಹ್ಯಾಚರಿಸ್	42,56,000
14. ಮೈಸೂರು ಹ್ಯಾಚರಿಸ್	80,000

ಸರ್ಕಾರಿ ಸಂಸ್ಥೆ

15. ಕೇಂದ್ರೀಯ ಕುಕ್ಕುಟ ತಳಿ ಅಭಿವೃದ್ಧಿ ಕ್ಷೇತ್ರ, ಹೆಸರಘಟ್ಟ	6,54,000
16. ರಾಜ್ಯ ಕುಕ್ಕುಟ ಅಭಿವೃದ್ಧಿ ಕ್ಷೇತ್ರ ಹೆಸರಘಟ್ಟ	16,70,000
17. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಗಂಗಾವತಿ	25,000
18. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಮಳವಳ್ಳಿ	97,000
19. ಮಾದರಿ ಕುಕ್ಕುಟ ಸಮೀಕ್ಷೆ ಯೋಜನೆ, ಹೆಸರಘಟ್ಟ	1,32,000
20. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಹಾವೇರಿ	1,50,000
21. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು	9,50,000

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಅಧ್ಯಕ್ಷರೇ, ಹ್ಯಾಚರೀಸ್ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ ಸ್ವದೇಶೀಯ ಉದ್ಯಮಗಳು 21 ಇದ್ದು, ವಿದೇಶೀಯ ಹ್ಯಾಚರೀಸ್ ಇಲ್ಲ ಎಂದಿದ್ದಾರೆ. ಮೂರನೆಯ ಪ್ರಶ್ನೆಗೆ ಈ ಸಂಸ್ಥೆಗಳ ಮೇಲೆ ಸಧ್ಯಕ್ಕೆ ಯಾವ ಹತೋಟಿ ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ನಾನಾದರೂ ಕೂಡ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆ ಕೇಳುತ್ತೇನೆ. ಸ್ವದೇಶಿ ಮುಖವಾಡದ ಹೆಸರಿನಲ್ಲಿ ಇಂಡಿಯನ್ ಕಂಪನೀಸ್ ಆಕ್ಟ್ ಪ್ರಕಾರ ವಿದೇಶಿ ಕಂಪನಿಗಳು ಅವು ದಂಧೆ

ನಡೆಸುತ್ತಿವೆ. ಈಸ್ಟ್ ಇಂಡಿಯಾ ಕಂಪನಿಯವರು ಈ ದೇಶಕ್ಕೆ ವ್ಯಾಪಾರಕ್ಕೆಂದು ಬಂದು ರಾಜ್ಯವನ್ನು ಹಿಡಿದಿದ್ದರು. ಅದೇ ರೀತಿ ಉದ್ಯಮದಲ್ಲಿ ಅವರು ವಿದೇಶಿ ಕಂಪನಿಗಳು ಸ್ವದೇಶಿ ಮುಖವಾಡದಲ್ಲಿ ಉದ್ಯಮ ನಡೆಸುತ್ತಿವೆ. ಉತ್ತರದಲ್ಲಿ ಹೇಳಿರುವಂತೆ ಅವರ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು ನಡೆಸುತ್ತಾರೆಂದು ಪ್ರಶ್ನೆ ಕೇಳಿದರೆ, ಈ ಸಂಸ್ಥೆಗಳು ಖಾಸಗಿ ಸಂಸ್ಥೆಗಳು ಸುಮಾರು 15 ಕೋಟಿ ರೂಪಾಯಿ ಲೆಕ್ಕ ಕೊಟ್ಟಿರುತ್ತಾರೆಂದು ಹೇಳಿದ್ದಾರೆ. ಲೆಕ್ಕವಿಲ್ಲದೆ ಎಷ್ಟು ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ಉಪಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:– ಜೊತೆಗೆ ಸರ್ಕಾರಿ ಸಂಸ್ಥೆಗಳು ಕೇವಲ 36ಲಕ್ಷ ರೂಪಾಯಿಗಳ ವ್ಯವಹಾರ ನಡೆಸುತ್ತಿವೆ. ಇದಕ್ಕೆ ಕಾರಣವೇನು ? ಮಾನ್ಯ ಮಂತ್ರಿಗಳು ಈಗಾಗಲೇ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಸಮರ್ಥರು ಇದ್ದೀರಿ, ಒಳ್ಳೆಯ ಚಿಂತನೆಯನ್ನು ಇಟ್ಟುಕೊಂಡು ಉತ್ಸಾಹ ಹಂಬಲದಿಂದ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಯಾವ ರೀತಿಯ ಹತೋಟಿಯನ್ನು ಹಾಕುತ್ತೀರಿ ಈ ಸಂಸ್ಥೆಗಳ ಮೇಲೆ. ಡೆಂಕಲ್ ಹೆಸರಿನಲ್ಲಿ ಈ ರಾಷ್ಟ್ರದಲ್ಲಿ ಅಂಡರ್ ಡೆವಲೆಪ್‌ಮೆಂಟ್ ಕಂಟ್ರೀಸ್‌ಗಳನ್ನು ಅವರು ಹತೋಟಿಯಲ್ಲಿ ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಆಗುತ್ತಿದೆ.

ಅಧ್ಯಕ್ಷರು:– ಮಾನ್ಯ ಸದಸ್ಯರು ಕನ್ಫೈಸ್ ಮಾಡಿ ಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ ಗೌಡ:– ಇಡೀ ರಾಜ್ಯದಲ್ಲಿ ಉದ್ಯಮದಾರರು ಏನಿದ್ದಾರೆ ಅವರ ಶೋಷಣೆಯಾಗುತ್ತಿರುವುದನ್ನು ಹೇಗೆ ತಪ್ಪಿಸುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸ್ವದೇಶಿ ಸಂಸ್ಥೆಗಳು 21.ಇದು ನಮಗೆ ಮಾಹಿತಿ ಕೊಟ್ಟಿರತಕ್ಕದ್ದು. ಅದು ಆದ ಮೇಲೆ ನಾನು ಅಧಿಕಾರಿಗಳನ್ನು ಕೇಳಿದೆ ನನಗೆ ಗೊತ್ತಿರುವ ಒಂದು ಸಂಸ್ಥೆಯೇ ಇಲ್ಲವೆಂದು ಹೇಳಿದೆ. 8 ಮಾಹಿತಿ ಕೊಟ್ಟಿಲ್ಲವೆಂದು ಈಗ ತಾನೇ ತಂದುಕೊಟ್ಟಿದ್ದಾರೆ. ಅಲ್ಲಿಗೆ 21 ಪ್ಲಸ್ 8 ಒಟ್ಟು 29 ಖಾಸಗಿ ಸಂಸ್ಥೆಗಳು, 7 ಸರ್ಕಾರೀ ಹ್ಯಾಚರಿಗಳಲ್ಲಿ ಸುಮಾರು 180ಲಕ್ಷ ಕೋಳಿಮರಿಗಳು ವರ್ಷಕ್ಕೆ ಉತ್ಪಾದನೆಯಾಗುತ್ತದೆ. ಅದು ಇನ್ನು ಎರಡು ಎರಡೂವರೆ ಕೋಟಿ ಆಗಬಹುದು. ಅವರು 15ಕೋಟಿ ಎಂದು ಹೇಳಿದರು. ಈ ಅಡಿಷನಲ್ ಇನ್‌ಫರ್ಮೇಶನ್ ನೋಡಿದರೆ 25 ಕೋಟಿ ವ್ಯವಹಾರ ಇದೆ. ಇದರ ಮೇಲೆ ಹಿಡಿತವಿಲ್ಲ, ಇದರ ಬಗ್ಗೆ ಯಾವ ವಿಧವಾದ ಸಂಶಯ ಬೇಕಾಗಿಲ್ಲ, ಯಾವಾಗ ಸರ್ಕಾರದ ಹಿಡಿತ ಇರುವುದಿಲ್ಲವೋ, ಖಾಸಗಿಯವರ ಹತ್ತಿರ ಮಾಹಿತಿ ಇರುವುದಿಲ್ಲ, ಅಂದಾಜು ವಹಿವಾಟು ಇಷ್ಟಿದೆಯೆಂದು ಕಳ್ಳ ಲೆಕ್ಕ ಸುಳ್ಳುಲೆಕ್ಕ ಇಟ್ಟುಕೊಂಡು ಹೇಳಿರುತ್ತಾರೆ. 1988ರಲ್ಲಿ ಒಂದು ಆಕ್ಟ್ ಇತ್ತು. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್ ಪ್ರಕಾರ 1988ರಿಂದ 1990ರವರೆಗೆ ಅದರ ಕ್ವಾಲಿಟಿ ನೋಡಿಕೊಳ್ಳತಕ್ಕದ್ದು ಹ್ಯಾಚರಿ ಮತ್ತು ಎಗ್ ಪ್ರೊಡಕ್ಷನ್ ಕಮರ್ಷಿಯಲ್ ಎಗ್ ಸೇರಿಕೊಂಡು ಆಕ್ಟ್ ಇತ್ತು. ಅದು 1990ಕ್ಕೆ ಲ್ಯಾಪ್ಸ್ ಆಯಿತು. 1990ರಿಂದ 1993ರವರೆಗೆ ಏನೂ ಇಲ್ಲ. ನಾನು ಈಗಾಗಲೇ ಲಾ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದೇನೆ. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್‌ನ್ನು ಈ ಸದನ ಮುಗಿಯುವುದರೊಳಗೆ ಮಾರ್ಚ್ 31ರೊಳಗೆ ಸಭೆಯ ಮುಂದೆ ಮಂಡಿಸುತ್ತೇನೆ.

ANNOUNCEMENT

Mr. Speaker:– I welcome the Brazilian Parlimentary Delegation who are witnessing the Assembly Proceedings from the Speaker's gallery, on behalf of this House.